ಕಾತರದಿಂದ ಕಾದಿತ್ತು. ಹಳ್ಳಕೊಳ್ಳಗಳಲ್ಲಿ ಮೈತೊಳೆದು, ಹಣೆಗೆ ವಿಭೂತಿಯಿಟ್ಟು ಪುಣ್ಯಾತ್ಮರ ಪಾದ ಮುಟ್ಟಿ ಪಾವನರಾಗಲು ಸಾಲು ಸಾಲಾಗಿತ್ತು. ತರೂರಿಂದ ತರಿಸಿದ ಡ್ರಾಮಾ ಸೀನಿನ ಮುರಿದ ಗ್ರಾಮಾ ಫೋನಿನ ಮುಳ್ಳು ನಿಂತಲ್ಲೆ ನಿಂತು,

ಮಾಯಾ ಮಯವೀ...
ಮಾಯಾ ಮಯವೀ...
ಮಾಯಾ ಮಯವೀ...

ಎಂದು ಹಾಡಿದ್ದೇ ಹಾಡುತ್ತ ಕಿಸುಬಾಯಿ ದಾಸನಾಗಿತ್ತು. ಅದರ ವಾರಸುದಾರ ಸವೆದ ಮುಳ್ಳ ಎತ್ತಿ, ಮುಳ್ಳಿನ ದಾರಿಯಲ್ಲಿ ತುಂಬಿದ್ದ ದೂಳೂಬಿ, ಮುಳ್ಳು ಅಳ್ಳಾಡುತ್ತ ನಡೆದು ಕಿರುಗುಟ್ಟಿ ಜೀವನ... ಎಂದು ಏದುಸಿರುಬಿಟ್ಟಿತ್ತು. ಮೈಕಾಸುರ ಪುಣ್ಯಾತ್ಮರ ನೋಡಿ ಪುಣ್ಯ ಕಟ್ಟಿಕೊಳ್ಳಲು ಸುತ್ತೇಳು ಹಳ್ಳಿಗಳ ಕೂಗಿ ಕರೆಯಿತು. ಪಡುವಲಿಗೆ ಹೊತ್ತಿಳಿದು ಬೈಗಾಗಿ ಮಕ್ಕತ್ತಲಾಯಿತು. ಗಿಜಿಗುಟ್ಟುತ್ತಿದ್ದ ಜನರ ಗೌಜು ಗದ್ದಲದಲ್ಲಿ ಬಿಗುಮಾನವಿಲ್ಲದೆ ಬಂದ ಪುಣ್ಯಾತ್ಮರು ಚಪ್ಪರದ ಮಧ್ಯೆ ಇದ್ದ ಗುಂಡಿಯೊತ್ತಿ ಊರಿಗೆಲ್ಲ ದೀಪ ಹಚ್ಚಿಟ್ಟರು. ಬುಡ್ಡಿಯ ಮಬ್ಬುಗತ್ತಲೆ ಮಾತ್ರ ಕಂಡಿದ್ದ ಇಡೀ ಊರು ಪುಣ್ಯಾತ್ಮರು ಹಚ್ಚಿಟ್ಟ ಬೆಳಕಲ್ಲಿ ಅವರ ಪಾದಕ್ಕೆ ಹಣೆಯೊತ್ತಿ ಪುಣ್ಯ ಕಟ್ಟಿಕೊಂಡರು. ಗಂಭೀರವದನರಾಗಿ ಎಲ್ಲರಿಗೆ ದರ್ಶನ ಕೊಟ್ಟ ಪುಣ್ಯಾತ್ಮರು ಮಠದ ದಾರಿ ಹಿಡಿದರು.

ಊರಿಗೆ ಬೆಳಕು ಬಂದ ನೆನಪಲ್ಲಿ ಕುರುಕ್ಷೇತ್ರ ನಾಟಕವಾಡಲು ಆಂಜನೇಯ ಕೃಪಾಪೋಷಿತ ನಾಟಕ ಮಂಡಳಿ ಸದಸ್ಯರು ಸಜ್ಜಾಗಿರುವರು. ಚನ್ನಂಗಿದುರ್ಗದ ಕುರುಕ್ಷೇತ್ರ ನಾಟಕ ನೋಡಲು ಬಲು ಚಂದವೆಂದು ಸುತ್ತೇಳು ಹಳ್ಳಿ ಜನ ಜಾತ್ರೆಯಂತೆ ಸೇರಿದರು. ಚಿಕ್ಕೀರಪ್ಪನ ಬಣವೆ ಬೇಲಿ ಮರೆಯಲ್ಲಿ ಒಲೆ ಮೇಲೆ ಮೂರು ಮಡಕೆಯಲ್ಲಿ ಇಳಿದ ಕಳ್ಳಭಟ್ಟಿ; ಕಾಸ್ಕೊಟ್ಟು ಕದ್ದು ಕುಡಿಯುವ ಗಿರಾಕಿಗಳಿಗಾಗಿ ಕಾದಿತ್ತು. ತಿಂಗ್ಳಾನುಗಟ್ಟಲೆ ಊರಲ್ಲಿ ಠಿಕಾಣೆ ಹೂಡಿದ್ದ ನಾಟಕದ ಮೇಸ್ಟ್ರು; ಕಳ್ಳಭಟ್ಟಿ ಅಮಲಲ್ಲಿ ಕಣ್ಮುಚ್ಚಿ ಬಾರಿಸಿದ ಹಾರ್ಮನಿಯಿಂದ ಜೇಂಕಾರದ ಸಂಗೀತ ಹೊರಟಿತ್ತು.

ಯುದ್ಧದಲ್ಲಿ ಗೆಲುವಿಗೆ ನೆರವು ಕೇಳಲು ದುರ್ಯೋಧನ ಕೃಷ್ಣನ ಸನ್ನಿಧಾನಕ್ಕೆ ಬಂದಿಳಿದ. ತಡವಾಗಿ ಬಂದರೂ ಕಾಲ್ದೆಸೆಯಲ್ಲಿ ಕುಂತ ಅರ್ಜುನ ಮೊದಲು ಕೃಷ್ಣನ ಕಣ್ಣಿಗೆ ಬಿದ್ದ. 'ಪಾರ್ಥ, ಪಾದದಡಿ ಏಕೆ ಕುಳಿತೆ. ಪಾರ್ಶ್ವದಲ್ಲಿ ಪೀಠವಿರಲಿಲ್ಲವೇ?' ಎಂದ ಕೃಷ್ಣ, ದುರ್ಯೋಧನ ಮೊದಲೇ ಬಂದ ವಿಚಾರ ತಿಳಿದರೂ ಕಪಟ ನಾಟಕವಾಡಿದ. ಮುಂದುವರಿದು, 'ಇಬ್ಬರೂ ಸಹಾಯ ಕೋರಿ ಬಂದ ಕಾರಣ ನಾನು ಉಭಯ ಸಂಕಟಕ್ಕೆ ಸಿಲುಕಿದೆ. ಚಿಂತೆಯಿಲ್ಲ, ಇಬ್ಬರಿಗೂ ಸಹಾಯ ಮಾಡುವೆ. ನಿರಾಯುಧನಾದ ನಾನೊಂದು ಕಡೆ, ಬಹು ಪರಾಕ್ರಮಿಗಳಾದ ಯೋಧರನ್ನು ಒಳಗೊಂಡ ಅಕ್ಷೋಹಿಣಿ ಸೈನ್ಯ ಮತ್ತೊಂದು ಕಡೆ; ಇದರಲ್ಲಿ ನಿಮಗೆ ಯಾವುದು ಇಷ್ಟವೋ ಅದನ್ನು ಆರಿಸಿಕೊಳ್ಳಬಹುದು. ಮೊದಲು ಬಂದವರು ಆದ್ಯತೆ ಮೇಲೆ ಆರಿಸಿಕೊಳ್ಳುವ ಹಕ್ಕುಳ್ಳವರು' ಎಂದ. ತಾನು ನಿಷ್ಪಕ್ಷಪಾತಿ ಎನ್ನುತ್ತಲೇ ಕಪಟತನದಿಂದ ಪಾಂಡವರ ಪಕ್ಷ ವಹಿಸಿದ. ಅಕ್ಷೋಹಿಣಿ ಸೈನವೇ ಸಾಕೆಂದ ದುರ್ಯೋಧನ ಮೊದಲ ಪಟ್ಟಲ್ಲೇ ಯುದ್ಧ ಸೋತಂತಾದ. ಕಾಡಾದಿಯ ಪರದೆ ಬಿದ್ದು;

ಮನಸ್ಸಿನ ಕ್ಲೇಶವ ಹರಿಸೊ ಮಹಾನುಭಾವ,
ಮನದಲಿ ನೊಂದೆನು ದೇವ ದೇವ ದೇವ,
ಸೂತ ಪುತ್ರಾನೆಂದು ಕರೆಯುವರೆನ್ನನು ಜಾತಿ
ಭೇದಾದಿಂದ ಮನದಿ ನೊಂದೆನು ದೇವ, ದೇವ,

ಎಂದು ಹಾಡುತ್ತ ಕರ್ಣ ಏಕಾಂಗಿಯಾಗಿ ರಂಗಸ್ಥಲ ಪ್ರವೇಶ ಮಾಡಿದ. ಮಾಯಾವಿಯಾಗಿ ಬಂದ ಕೃಷ್ಣ ಅವನ ಬೆನ್ನು ತಟ್ಟಿ ಸೋಜಿಗಪಡಿಸಿದ. ಕರ್ಣ, ಕೃಷ್ಣನ ಮಾಯಾವಿತನಕ್ಕೆ ತನ್ನನ್ನೇ ನಂಬದಾದ. ಕುಂತಿ ನಿನ್ನ ಹೆತ್ತಮ್ಮನೆಂಬ ಗುಟ್ಟು ಬಿಚ್ಚಿಟ್ಟು; ಕೃಷ್ಣ ಕರ್ಣನ ಮತ್ತಷ್ಟು ವಿಚಲಿತಗೊಳಿಸಿದ. ಹೆತ್ತಮ್ಮ ನಿನ್ನ ನೋಡಲು ಇತ್ತಲೇ ಬರುತ್ತಿರುವಳೆಂದು ಬಂದಂತೆ ಮಾಯವಾದ.

ಕುಂತಿ ಪಾತ್ರಧಾರಿ ನಿಂಗಪ್ಪ ಹೆಂಡತಿ ರೇಷ್ಮೆ ಸೀರೆಯುಟ್ಟು ಹದಿಹರೆಯದ ಹೆಣ್ಣಂತೆ ಕಂಡ. ತಾಯಿ–ಮಗನ ಪಾತ್ರಧಾರಿಗಳು ಅಪರೂಪದ ಸಂಗಮದಿಂದ ಕಣ್ಣೀರ ಕೋಡಿಯಾದರು. ಇಬ್ಬರ ನಟನೆಯಿಂದ ನಾಟಕವೆಂಬುದ ಮರೆತು ಊರ ಹೆಂಗರುಳಗಳು ಶೋಕ ಸಾಗರದಲ್ಲಿ ಮುಳುಗಿದರು. ನಿನ್ನ ಪಾಲಿಗೆ ಸಾವಾಗಿ ಬಂದಿರುವ ತಾಯಿ ಮಾತಿಗೆ ಬೆಲೆಕೊಡಬೇಡ; ಕೊಟ್ಟೆಯೆಂದರೆ ನಿನ್ನ ತಲೆ